ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 3, Nov-Dec 2021, Pp 52-57**
**©*IIMRD*, Mysuru**

IIMRD JOURNALS

www.iimrd.com

# ಚಾಮರಾಜನಗರದ ಬೌದ್ಧ ಉಪಾಸಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ದೊರೆಸ್ವಾಮಿ. ಕೆ.ಎನ್[1], ಪ್ರೊ. ಚಂದ್ರಶೇಖರ್[2]**

[1]ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

[2]ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

**ಸಾರಾಂಶ: (Abstract)**

*ಧರ್ಮವು ಮಾನವನ ಸಾಮಾಜೀಕರಣದ ಸಾಧನವೂ ಹೌದು. ಧರ್ಮ ಎಂಬ ಪರಿಕಲ್ಪನೆಯನ್ನು ಸೀಮಿತ ಅರ್ಥದಲ್ಲಿ ನೋಡದೆ ವಿಸ್ತೃತವಾಗಿ ಪರಿಶೀಲಿಸಬೇಕಾಗಿದೆ. ಪ್ರತಿಯೊಂದು ಧರ್ಮವೂ ತನ್ನದೇ ಆದ ಸೈದ್ಧಾಂತಿಕ ದೃಷ್ಟಿಕೋನವನ್ನು ಒಳಗೊಂಡಿರುತ್ತದೆ. ಈ ದೃಷ್ಟಿಕೋನಗಳು ಮಾನವನ ಅಭಿವೃದ್ಧಿಗೆ ಪೂರಕವಾಗಿರುತ್ತವೆ ಎಂದು ಭಾವಿಸಲಾಗಿದೆ. ಒಂದು ಧರ್ಮದ ಧಾರ್ಮಿಕ ನೀತಿಗಳು ಮಾನವನ ಅಭಿವೃದ್ಧಿಯನ್ನು ಪ್ರಭಾವಿಸಬಲ್ಲುವು ಎಂಬುದನ್ನು ಮ್ಯಾಕ್ಸ್ ವೆಬರ್ ಅವರ 'ಪ್ರೊಟೆಸ್ಟೆಂಟ್ ಎಥಿಕ್ಸ್ ಅಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ' ಎಂಬ ಸಿದ್ಧಾಂತದ ಮೂಲಕ ಕಂಡುಕೊಂಡಿದ್ದೇವೆ. ಅದೇ ರೀತಿ ಪ್ರತಿಯೊಂದು ಧರ್ಮದ ಧಾರ್ಮಿಕ ನೀತಿ–ನಿಯಮಗಳು ಸಾಮಾಜಿಕ ಬದಲಾವಣೆಯನ್ನು ಉಂಟುಮಾಡಬಲ್ಲವು ಹಾಗೂ ವ್ಯಕ್ತಿಯ ಸಾಮಾಜಿಕ ಚಿಂತನಾ ಕ್ರಮವನ್ನು ಬದಲಿಸಬಲ್ಲವು.*

**ಮುಖ್ಯಪದಗಳು (Keywords):** ಚಾಮರಾಜನಗರ, ಬೌದ್ಧ ಉಪಾಸಕರು, ಬೌದ್ಧ ಧಮ್ಮ.

## ಪೀಠಿಕೆ

ಭಾರತೀಯ ಸಾಮಾಜಿಕ ಹಿನ್ನೆಲೆಯನ್ನು ಪರಿಶೀಲಿಸಿದಾಗ ವೈದಿಕಶಾಹಿ ವ್ಯವಸ್ಥೆಗೆ ಪ್ರತಿಭಟನಾ ಚಳುವಳಿಯ ರೂಪದಲ್ಲಿ ಹುಟ್ಟಿಕೊಂಡ ಜೈನಧರ್ಮ, ಬೌದ್ಧ ಧಮ್ಮ ಮತ್ತು ವಚನ ಚಳುವಳಿಗಳು ಹೊಸ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದವು. ಅಲ್ಲದೆ ಮಾನವನ ಚಿಂತನಾ ಕ್ರಮದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಉಂಟು ಮಾಡಿದವು. ಪ್ರಸುತ್ತ ಲೇಖನದಲ್ಲಿ ಬೌದ್ಧ ಧಮ್ಮದ ತತ್ವಾದರ್ಶಗಳು ಬೌದ್ಧ ಉಪಾಸಕರ ಜೀವನ ಶೈಲಿಯಲ್ಲಿ ಉಂಟು ಮಾಡಿರುವ ಅಮೂಲಾಗ್ರ ಬದಲಾವಣೆಗಳನ್ನು ತಿಳಿಯಬಹುದಾಗಿದೆ.

*Please cite this article as: ದೊರೆಸ್ವಾಮಿ. ಕೆ.ಎನ್. (2021).* ಚಾಮರಾಜನಗರದ ಬೌದ್ಧ ಉಪಾಸಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ. *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 52–57.*

**ಬೌದ್ಧ ಧಮ್ಮ ಮತ್ತು ಸಾಮಾಜಿಕ ಬದಲಾವಣೆ**

ಕ್ರಿ. ಪೂ. ಆರನೇ ಶತಮಾನವು ಪ್ರಪಂಚದ ಅತ್ಯಂತ ಬದಲಾವಣೆಯ ಕಾಲವಾಗಿದೆ. ಈ ಶತಮಾನದಲ್ಲಿ ಪ್ರಪಂಚದ ಅನೇಕ ಭಾಗಗಳ ವಿವಿಧ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳಾದವು. ಪ್ರಪಂಚದ ವಿವಿಧ ಭಾಗಗಳಲ್ಲಿದ್ದ ಧಾರ್ಮಿಕ ಹಿತಚಿಂತಕರು ಸಮಾಜದಲ್ಲಿ ಹೊಸ ಬದಲಾವಣೆ ತರಲು ಬಯಸಿದರು. ಇದರ ಫಲವಾಗಿಯೇ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಧಾರ್ಮಿಕ ಆಂದೋಲನ ಉಂಟಾಯಿತು. ಈ ಆಂದೋಲನ ಭಾರತದಲ್ಲೂ ಉಂಟಾಯಿತು ಮತ್ತು ಅದು ಹೊಸ ಧರ್ಮಗಳ ಉಗಮಕ್ಕೆ ಕಾರಣವಾಯಿತು.

ಬೌದ್ಧ ಧಮ್ಮವು ನೈತಿಕತೆ ಮತ್ತು ತಾತ್ವಿಕತೆಯ ಆಧಾರದ ಮೇಲೆ ಸ್ಥಾಪಿತವಾದ ಧಮ್ಮವಾಗಿದೆ. 2600 ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವ ಬೌದ್ದ ಧಮ್ಮವು ಕರುಣೆ, ಮಮತೆ, ದಯೆ, ಜಾತ್ಯತೀತ ನಿಲುವುಗಳು ಪ್ರಸಾರಕ್ಕೆ ಕಾರಣವಾಯಿತು. ಇರಾನ್, ಆಫ್ಘಾನಿಸ್ತಾನದಿಂದ ಹಿಡಿದು ದಕ್ಷಿಣ ಭಾರತ ಸೇರಿದಂತೆ ಶ್ರೀಲಂಕಾ ಉತ್ತರ ಭಾರತ ಬರ್ಮಾ ಪೂರ್ವ ರಾಷ್ಟ್ರಗಳಾದ ಚೀನಾ, ಜಪಾನ್, ಇಂಡೋನೇಷಿಯಾ, ಕೊರಿಯಾ ಮುಂತಾದ ರಾಷ್ಟ್ರಗಳವರೆಗೆ ಬುದ್ಧ ಪರಂಪರೆ ಆವರಿಸಿತ್ತು. ಅಷ್ಟೇ ಅಲ್ಲದೆ ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಂಡ ವಚನ ಚಳುವಳಿ ಕೂಡ ಬೌದ್ಧ ಧಮ್ಮದ ನಕಲು. ಭಗವದ್ಗೀತೆ, ತಿರುಕ್ಕುರಲ್ ಹಾಗೂ ಬೈಬಲ್ ಈ ಮೂರು ಧಾರ್ಮಿಕ ಗ್ರಂಥಗಳು ಬೌದ್ಧ ಧಮ್ಮದ ಅನೇಕ ಅಂಶಗಳನ್ನು ಒಳಗೊಂಡಿದೆ. ಬುದ್ಧರಿಂದ ಪ್ರಾರಂಭವಾದ ಈ ಧಮ್ಮವು ಇಂದು ವಿಶ್ವದಾದ್ಯಂತ ಪಸರಿಸಿದೆ. ಪ್ರಸ್ತುತ ಲೇಖನದಲ್ಲಿ ಬೌದ್ಧ ಉಪಾಸಕರ ವೈಯಕ್ತಿಕ ಚಿಂತನಾ ಕ್ರಮದಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಅರಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

**ಅಧ್ಯಯನದ ಮಹತ್ವ**

ಬೌದ್ಧ ಉಪಾಸಕರ ಬೌದ್ಧಿಕತೆಯ ಮೇಲೆ ಬೌದ್ಧಧಮ್ಮವು ಬೀರಿರುವ ಪ್ರಭಾವವನ್ನು ಪ್ರಸ್ತುತ ಅಧ್ಯಯನದಿಂದ ತಿಳಿಯಬಹುದಾಗಿದೆ. ಇದಲ್ಲದೇ ಬೌದ್ಧ ಉಪಾಸಕರ ವಯಕ್ತಿಕ ಚಿಂತನಾ ಕ್ರಮದಲ್ಲಿ ಉಂಟಾಗಿರುವ ಬದಲಾವಣೆಗಳು ಹಾಗೂ ಬೌದ್ಧಧಮ್ಮದ ತತ್ವದಾರ್ಶಗಳನ್ನು ತಿಳಿಯಬಹುದಾಗಿದೆ.

**ಅಧ್ಯಯನದ ಮಾದರಿ**

ಚಾಮರಾಜನಗರದಲ್ಲಿ ಬೌದ್ಧ ಧಮ್ಮವನ್ನು ಅನುಸರಿಸುತ್ತಿರುವ ಒಟ್ಟು 215 ಪುರುಷ ಬೌದ್ಧ ಉಪಾಸಕರಲ್ಲಿ, ಪ್ರಸ್ತುತ ಅಧ್ಯಯನಕ್ಕೆ ಉದ್ದೇಶಿತ ನಮೂನೆಯನ್ನು (Purposive sampling method) ಬಳಸಿಕೊಂಡು 50 ಪುರುಷ ಬೌದ್ಧ ಉಪಾಸಕರನ್ನು ಅಧ್ಯಯನಕ್ಕೊಳಪಡಿಸಿ ಮಾಹಿತಿ ಸಂಗ್ರಹಿಸಲಾಗಿದೆ.

**ಸಂಶೋಧನಾ ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಸಂದರ್ಶನ ಮತ್ತು ಸಂದರ್ಶನ ಅನುಸೂಚಿ, ಸಹಭಾಗಿತ್ವ ಅವಲೋಕನ, ಪ್ರಕರಣ ಅಧ್ಯಯನ, ಗುಂಪುಚರ್ಚೆ ವಿಧಾನಗಳನ್ನು

ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ನಿಯತಕಾಲಿಕೆಗಳು, ವರದಿಗಳು, ಮಾಸಪತ್ರಿಕೆಗಳು, ದಿನಪತ್ರಿಕೆಗಳು ಮತ್ತು ಅಂತರ್ಜಾಲದಿಂದ ಸಂಗ್ರಹಿಸಲಾಗಿದೆ.

## ಬೌದ್ಧ ಧಮ್ಮ ಮತ್ತು ವೈಯುಕ್ತಿಕ ಚಿಂತನಾ ಕ್ರಮಗಳು

ಬೌದ್ಧ ಧಮ್ಮವು ಬೌದ್ಧ ಉಪಾಸಕರ ಜೀವನ ಕ್ರಮವನ್ನು ಪ್ರಭಾವಿಸುವ ಮೂಲಕ ಅವರ ನಂಬಿಕೆ, ಆಚರಣೆ, ಹಾಗೂ ಜೀವನ ಶೈಲಿಯ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಬಹುದಾಗಿದೆ.

**ಕೋಷ್ಟಕ 1: ವಯಕ್ತಿಕ ಚಿಂತನಾ ಕ್ರಮದಲ್ಲಿ ಉಂಟಾಗಿರುವ ಬದಲಾವಣೆಯ ವಿವರ**

| ವಯಕ್ತಿಕ ಚಿಂತನಾ ಕ್ರಮದ ವಿವರ | ಬೌದ್ಧ ಧಮ್ಮ ಸ್ವೀಕಾರಕ್ಕೂ ಮೊದಲು | | | | ಬೌದ್ಧ ಧಮ್ಮ ಸ್ವೀಕಾರದ ನಂತರ | | | |
|---|---|---|---|---|---|---|---|---|
| | ಹೌದು | | ಇಲ್ಲ | | ಹೌದು | | ಇಲ್ಲ | |
| | ಆವೃತ್ತಿ | ಶೇ | ಆವೃತ್ತಿ | ಶೇ | ಆವೃತ್ತಿ | ಶೇ | ಆವೃತ್ತಿ | ಶೇ |
| ಆತ್ಮ ಸಿದ್ಧಾಂತದ ಬಗ್ಗೆ ನಂಬಿಕೆ ಹೊಂದಿದ್ದೀರಾ? | 37 | 74% | 13 | 26% | 9 | 18% | 41 | 82% |
| ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆ ಹೊಂದಿದ್ದೀರಾ? | 42 | 84% | 8 | 16% | 0 | 0% | 50 | 100% |
| ಅಮಲು ಬರುವ ವಸ್ತುಗಳನ್ನು ಬಳಸುತ್ತೀದ್ದೀರಾ? | 33 | 66% | 17 | 34% | 3 | 6% | 47 | 94% |
| ನಿಮ್ಮ ನೆರೆಹೊರೆಯವರೊಂದಿಗೆ ಗೌರವಯುತವಾಗಿ ವ್ಯವಹರಿಸುತ್ತಿದ್ದೀರಾ? | 23 | 46% | 27 | 54% | 39 | 78% | 11 | 22% |
| ಎಲ್ಲಾ ಜೀವಿಗಳ ಬಗ್ಗೆ ಕರುಣೆಯನ್ನು ಹೊಂದಿದ್ದೀರಾ? | 19 | 38% | 31 | 62% | 50 | 100 % | 00 | 0% |
| ಜೀವನದ ನಿಜವಾದ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಾಗಿದೆಯೇ? | 21 | 42% | 29 | 58% | 26 | 52% | 24 | 48% |
| ನಿಮ್ಮನ್ನು ದ್ವೇಷಿಸುವವರ ಬಗ್ಗೆ ಪ್ರೀತಿಯನ್ನು ಹೊಂದಿದ್ದೀರಾ? | 16 | 32% | 34 | 68% | 46 | 92% | 4 | 8% |

***ಮೂಲ:ಪ್ರಾಥಮಿಕ ಮಾಹಿತಿ***

## ಆತ್ಮ ಸಿದ್ಧಾಂತದ ನಂಬಿಕೆಯ ಬಗೆಗಿನ ವಿವರ

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಬೌದ್ಧಧಮ್ಮ ಸ್ವೀಕಾರಕ್ಕೂ ಮುಂಚೆ 74% ಪ್ರತಿವರ್ತಿಗಳು ಆತ್ಮ ಸಿದ್ಧಾಂತದ ಬಗ್ಗೆ ನಂಬಿಕೆ ಹೊಂದಿದ್ದಾರೆ. ಆದರೆ ಬೌದ್ಧಧಮ್ಮ ಸ್ವೀಕಾರದ ನಂತರ 82% ಪ್ರತಿ ವರ್ತಿಗಳು ಆತ್ಮ ಸಿದ್ಧಾಂತದ ಬಗ್ಗೆ ನಂಬಿಕೆಯನ್ನು ಹೊಂದಿಲ್ಲ. ಕಾರಣ ಬೌದ್ಧಧಮ್ಮವು ಆತ್ಮ ಸಿದ್ಧಾಂತದಲ್ಲಿ ನಂಬಿಕೆಯನ್ನು ಹೊಂದಿಲ್ಲ. ಆತ್ಮವನ್ನು ಆಧರಿಸಿದ ಧರ್ಮವು ಊಹೆಯ ಮೇಲೆ ನಿಂತಿರುವ ಧರ್ಮವಾಗಿರುತ್ತದೆ. ಆತ್ಮವನ್ನು ಯಾರೂ ನೋಡಿಲ್ಲ ಅಥವಾ ಅದರ ಜೊತೆ ಸಂಭಾಷಣೆ ನಡೆಸಿಲ್ಲ ಅಲ್ಲದೆ ಆತ್ಮವೂ ಅಪರಿಚಿತ ಮತ್ತು ಅಜ್ಞಾತ ವಾದುದಾಗಿದೆ. ಇದು ಮೌಢ್ಯತೆಗೆ ದಾರಿ ಮಾಡಿಕೊಡುತ್ತದೆ ಎಂಬುದು ಬುದ್ಧರ ಬೋಧನೆಯಾಗಿದೆ. ಈ ಲೋಕದಲ್ಲಿ ಅಸ್ತಿತ್ವದಲ್ಲಿರುವುದು ಆತ್ಮವಲ್ಲ ಮನಸ್ಸು ಎಂಬುದನ್ನು ಬುದ್ಧರು ತಿಳಿಸಿದ್ದಾರೆ. ಬುದ್ಧನಿಗೆ ಆತ್ಮದ ಬಗ್ಗೆ ಯಾವ ನಂಬಿಕೆಯೂ ಇಲ್ಲದ ಕಾರಣ ಅವನ ಸಿದ್ಧಾಂತವನ್ನು ಅನಾತ್ಮವಾದ ಎಂದು ಕರೆಯಲಾಗಿದೆ.

**ಅತಿಮಾನುಷ ಶಕ್ತಿಯ ಬಗೆಗಿನ ನಂಬಿಕೆಯ ವಿವರ**

ಜಗತ್ತಿನ ಆಗುಹೋಗುಗಳಿಗೆ ಅತಿಮಾನುಷ ಶಕ್ತಿಯ ಕಾರಣ ಎಂದು ನಂಬಿದ್ದ 84% ಪ್ರತಿವರ್ತಿಗಳನ್ನು ಕಾಣಬಹುದಾಗಿದೆ. 16% ಪ್ರತಿವರ್ತಿಗಳು ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆ ಹೊಂದಿಲ್ಲದೇ ಇರುವುದು ಕಂಡುಬಂದಿದೆ. ಆದರೆ ಬೌದ್ಧ ಧಮ್ಮ ಸ್ವೀಕಾರದ ನಂತರ 100% ಪ್ರತಿವರ್ತಿಗಳು ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆಯನ್ನು ಹೊಂದದೇ ಇರುವುದು ಕಂಡುಬಂದಿದೆ. ಕಾರಣ ಬೌದ್ಧಧಮ್ಮವು ಅತಿಮಾನುಷ ಶಕ್ತಿಯನ್ನು ಮಾನ್ಯ ಮಾಡುವುದಿಲ್ಲ ಪ್ರತಿಯೊಂದು ಘಟನೆಯೂ ಮನುಷ್ಯನ ಕ್ರಿಯೆ ಮತ್ತು ನೈಸರ್ಗಿಕ ನಿಯಮದ ಪ್ರತಿಫಲವಾಗಿರುತ್ತದೆ ಎಂದು ಹೇಳಿದ್ದಾರೆ. ಅಲ್ಲದೆ ಅತೀಂದ್ರಿಯ ಶಕ್ತಿಗಳ ಆರಾಧನೆ ಮಾಡುವುದು ಧಮ್ಮದ ಭಾಗವಲ್ಲ ಎಂದು ತಿಳಿಸಿರುವ ಕಾರಣ ಉಪಾಸಕರು ಈ ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆ ಹೊಂದದೇ ಇರುವುದು ಕಂಡುಬಂದಿದೆ.

**ಅಮಲು ಬರುವ ವಸ್ತುಗಳನ್ನು ಬಳಸುವುದಕ್ಕೆ ಸಂಬಂಧಿಸಿದ ವಿವರ**

ಬೌದ್ಧ ಧಮ್ಮ ಸ್ವೀಕಾರಕ್ಕೂ ಮೊದಲು 66% ಪ್ರತಿವರ್ತಿಗಳು ಮದ್ಯಪಾನ ಧೂಮಪಾನ ಮತ್ತು ಅಮಲು ಬರುವ ವಸ್ತುಗಳನ್ನು ಬಳಸುವುದಾಗಿ ತಿಳಿಸಿರುತ್ತಾರೆ. 34% ಪ್ರತಿವರ್ತಿಗಳು ಬೌದ್ಧಧಮ್ಮ ಸ್ವೀಕಾರಕ್ಕೂ ಮೊದಲು ಅಮಲು ಬರುವ ವಸ್ತುಗಳ ಸೇವನೆಯಿಂದ ದೂರ ಇರುವುದನ್ನು ಕಾಣುತ್ತೇವೆ. ಬೌದ್ಧಧಮ್ಮ ಸ್ವೀಕಾರದ ನಂತರ 94% ಪ್ರತಿವರ್ತಿಗಳು ಅಮಲು ಬರುವ ವಸ್ತುಗಳನ್ನು ಬಳಸದೆ ಇರುವುದು ಕಂಡುಬಂದಿದೆ. ಕಾರಣ ಬೌದ್ಧಧರ್ಮವು ಪಂಚಶೀಲಗಳ ಪಾಲನೆಗೆ ಒತ್ತು ಕೊಟ್ಟಿದ್ದು ಪ್ರತಿಯೊಬ್ಬ ಬೌದ್ಧ ಉಪಾಸಕನು ಅಮಲು ಬರುವ ವಸ್ತುಗಳನ್ನು ಬಳಸದೆ ಪಂಚಶೀಲವನ್ನು ಪಾಲನೆ ಮಾಡುತ್ತಿದ್ದಾರೆ. ಆದರೂ 6% ಪ್ರತಿ ವರ್ತಿಗಳು ಪಂಚಶೀಲ ಪಾಲನೆ ಮಾಡದೇ ಇರುವುದು ಕಂಡುಬಂದಿದೆ.

**ನೆರೆಹೊರೆಯವರೊಂದಿಗೆ ಗೌರವಯುತವಾಗಿ ವ್ಯವಹರಿಸುವುದರ ವಿವರ**

ಮಾನವ ಸಮಾಜ ಜೀವಿಯಾಗಿದ್ದು, ಸಮಾಜದೊಂದಿಗೆ ಬದುಕಬೇಕಾಗಿರುವುದರಿಂದ ಸಾಮಾಜಿಕ ಸಂಘರ್ಷಗಳು ಸಹಜವಾಗಿರುತ್ತವೆ. ಸಂಘರ್ಷಗಳಿಗೆ ಕಾರಣ ನಾವು ಇತರರೊಂದಿಗೆ ಪ್ರತಿಕ್ರಿಯಿಸುವ ರೀತಿಯು ಮುಖ್ಯವೆನಿಸುತ್ತದೆ. ಈ ಮೇಲಿನ ಕೋಷ್ಟಕದಲ್ಲಿ 46% ಪ್ರತಿವರ್ತಿಗಳು ತಮ್ಮ ನೆರೆಹೊರೆಯವರೊಂದಿಗೆ ಗೌರವಯುತವಾಗಿ ವ್ಯವಹರಿಸುತ್ತಿದ್ದು, 54% ಪ್ರತಿವರ್ತಿಗಳು ನೆರೆಹೊರೆಯವರೊಂದಿಗೆ ಉತ್ತಮ ರೀತಿಯ ವರ್ತನೆಯನ್ನು ಹೊಂದದೇ ಇರುವುದು ಕಂಡುಬಂದಿದೆ. ಆದರೆ ಬೌದ್ಧ ಧಮ್ಮ ಸ್ವೀಕಾರದ ನಂತರ 78% ಪ್ರತಿವರ್ತನೆಗಳು ನೆರೆಹೊರೆಯವರೊಂದಿಗೆ ಗೌರವಯುತವಾಗಿ ನಡೆದುಕೊಳ್ಳುತ್ತಿರುವುದು ಕಾಣಬಹುದು ಹಾಗೂ 22% ಪ್ರತಿ ವರ್ತಿಗಳು ನೆರೆಹೊರೆಯೊಂದಿಗೆ ಉತ್ತಮ ಸಂಬಂಧವನ್ನು ಹೊಂದದೇ ಇರುವುದು ಕಂಡುಬಂದಿದೆ.

**ಎಲ್ಲಾ ಜೀವಿಗಳ ಬಗ್ಗೆ ಹೊಂದಿರುವ ಕರುಣೆಯ ಬಗೆಗಿನ ವಿವರ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಬೌದ್ಧಧಮ್ಮ ಸ್ವೀಕಾರಕ್ಕೂ ಮೊದಲು 62% ಪ್ರತಿವರ್ತಿಗಳು ಎಲ್ಲಾ ಜೀವಿಗಳ ಬಗ್ಗೆ ಕರುಣೆ ಹೊಂದಲು ಸಾಧ್ಯವಾಗದೇ ಇರುವುದು ಕಂಡುಬಂದಿದೆ. 38%

ಪ್ರತಿವರ್ತಿಗಳು ಎಲ್ಲಾ ಜೀವಿಗಳ ಬಗ್ಗೆ ಕರುಣೆಯನ್ನು ಹೊಂದಿರುವುದು ಕಂಡುಬಂದಿದೆ ಜಗತ್ತಿನಲ್ಲಿ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ ನಮ್ಮ ಸಾಮಾಜಿಕ ಆಚರಣೆಗಳು ಅಥವಾ ಸಂಸ್ಕೃತಿಯ ಭಾಗವಾಗಿ ಅಥವಾ ಸಾಮಾಜಿಕ ಜವಾಬ್ದಾರಿಗಳ ಅರಿವಿನ ಕೊರತೆಯಿಂದ ಎಲ್ಲ ಜೀವಿಗಳ ಬಗ್ಗೆ ಕರುಣೆ ಹೊಂದಲು ಸಾಧ್ಯವಾಗದೆ ಇರುವುದು ಕಂಡುಬಂದಿದೆ.

ಬೌದ್ಧ ಧಮ್ಮ ಸ್ವೀಕಾರದ ನಂತರ 100% ಪ್ರತಿವರ್ತಿಗಳ ಎಲ್ಲಾ ಜೀವಿಗಳಲ್ಲಿ ಕರುಣೆಯನ್ನು ಹೊಂದಲು ಸಾಧ್ಯವಾಗಿರುವುದು ಕಂಡುಬಂದಿದೆ. ಕಾರಣ ಯಾವುದೇ ಜೀವಿ ದುರ್ಬಲವಾಗಿರಲಿ ಅಥವಾ ಪ್ರಬಲವಾಗಿರಲಿ ಅಥವಾ ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ಎಲ್ಲಾ ಜೀವಿಗಳಿಗೂ ಒಳ್ಳೆಯದನ್ನು ಬಯಸಬೇಕು. ತಾಯಿ ತನ್ನ ಜೀವವನ್ನು ಒತ್ತೆ ಇಟ್ಟು ಮಗುವನ್ನು ರಕ್ಷಿಸುವಂತೆ ಎಲ್ಲಾ ಜೀವಿಗಳ ಬಗ್ಗೆ ಮಮತೆಯನ್ನು ಬೆಳೆಸಿಕೊಳ್ಳಬೇಕು ಎಂಬ ಬುದ್ಧನ ಬೋಧನೆಯನ್ನು ಬೌದ್ಧ ಉಪಾಸಕರು ಅನುಸರಿಸುತ್ತಿರುವುದು ಕಂಡುಬಂದಿದೆ.

**ಜೀವನದ ನಿಜವಾದ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಾಗಿರುವವರ ವಿವರ**

ಮೇಲಿನ ಕೋಷ್ಟಕದಲ್ಲಿ ಬೌದ್ಧಧಮ್ಮ ಸ್ವೀಕಾರಕ್ಕೂ ಮೊದಲು 58% ಪ್ರತಿವರ್ತಿಗಳು ತಮ್ಮ ಜೀವನದಲ್ಲಿ ನಿಜವಾದ ಸಂತೋಷ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು, 42% ಪ್ರತಿವರ್ತಿಗಳು ಸಾಧ್ಯವಾಗಿದೆ ಎಂಬುದನ್ನು ತಿಳಿಸಿದ್ದಾರೆ. ಬೌದ್ಧ ಧಮ್ಮ ಸ್ವೀಕಾರದ ನಂತರ 52% ಪ್ರತಿವರ್ತಿಗಳು ಜೀವನದ ನಿಜವಾದ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ ಎಂಬುದನ್ನು 48% ಪ್ರತಿವರ್ತಿಗಳು ನಿಜವಾದ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ತಿಳಿಸಿದ್ದಾರೆ.

**ನಿಮ್ಮನ್ನು ದ್ವೇಷಿಸುವವರ ಬಗ್ಗೆ ಪ್ರೀತಿಯನ್ನು ಹೊಂದಿರುವ ಬಗೆಗಿನ ವಿವರ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ 68% ಪ್ರತಿವರ್ತಿಗಳು ಬೌದ್ಧಧಮ್ಮ ಸ್ವೀಕಾರಕ್ಕೂ ಮೊದಲು ತಮ್ಮನ್ನು ದ್ವೇಷಿಸುವವರ ಬಗ್ಗೆ ಪ್ರೀತಿಯನ್ನು ಹೊಂದುವಲ್ಲಿ ವಿಫಲರಾಗಿದ್ದಾರೆ. ಬೌದ್ಧ ಧಮ್ಮ ಸ್ವೀಕಾರದ ನಂತರ 92% ಪ್ರತಿವರ್ತಿಗಳು ತಮ್ಮನ್ನು ದ್ವೇಷಿಸುವವರ ಬಗ್ಗೆ ಅನುಕಂಪ ಪ್ರೀತಿಯನ್ನು ಹೊಂದಿರುವುದು ಕಂಡುಬಂದಿದೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

- ಬೌದ್ಧ ಧಮ್ಮ ಸ್ವೀಕಾರದ ನಂತರ 100% ಪ್ರತಿ ವರ್ತಿಗಳು ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆ ಹೊಂದಿಲ್ಲದಿರುವುದು ಕಂಡುಬಂದಿದೆ.
- 94% ಪ್ರತಿವರ್ತಿಗಳು ಬೌದ್ಧಧಮ್ಮ ಸ್ವೀಕಾರ ನಂತರ ಅಮಲು ಬರುವ ವಸ್ತುಗಳನ್ನು ಬಳಸದೆ ಉತ್ತಮ ರೀತಿಯಲ್ಲಿ ಜೀವನ ನಡೆಸುತ್ತಿರುವುದು ಕಂಡು ಬಂದಿದೆ.
- 48% ಪ್ರತಿವರ್ತಿಗಳು ಬೌದ್ಧಧಮ್ಮ ಸ್ವೀಕಾರ ನಂತರ ತಮ್ಮ ಜೀವನದ ನಿಜವಾದ ಸಂತೋಷ ಯಾವುದೆಂಬುದನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿರುವುದು ಕಂಡುಬಂದಿದೆ.

- ಬೌದ್ಧಧಮ್ಮ ಸ್ವೀಕಾರ ನಂತರ ಪ್ರತಿವರ್ತಿಗಳು ವೈಯಕ್ತಿಕ ಚಿಂತನಾ ಕ್ರಮದಲ್ಲಿ ಬದಲಾವಣೆಗಳು ಉಂಟಾಗಿರುವುದನ್ನು ಕಾಣಬಹುದಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಒಂದು ಧರ್ಮದ ಸಾಮಾಜಿಕ ವ್ಯವಸ್ಥೆಯಲ್ಲಿನ ಅಸಮಾನತೆಯಿಂದಾಗಿ ಅಥವಾ ಅಲ್ಲಿನ ಲೋಪದೋಷಗಳಿಂದಾಗಿ ಅಥವಾ ಹೊಸ ಧರ್ಮದ ತತ್ವಾದರ್ಶಗಳ ಪ್ರಭಾವಕ್ಕೆ ಒಳಗಾಗಿ ಹೊಸ ಧರ್ಮವನ್ನು ಸ್ವೀಕರಿಸಿ ಆ ವ್ಯವಸ್ಥೆಯಲ್ಲಿ ತಮ್ಮ ಜೀವನಕ್ರಮ ಮತ್ತು ಚಿಂತನೆಗಳಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಕಂಡುಕೊಳ್ಳುವಲ್ಲಿ ಬೌದ್ಧ ಉಪಸಾಕರು ಯಶಸ್ವಿಯಾಗಿರುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ವರ್ಧನ್. ಬಿ. ಕೆ. ಎಸ್. (2014). ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ. ಸಂಶೋಧನಾ ಗ್ರಂಥ. ಶಿಕ್ಷಣ ಸಂಗ್ರಾಮ ಪ್ರಕಾಶನ, ಧಾರವಾಡ.
- ಸೋಂದಲಗೆರೆ ಲಕ್ಷ್ಮಿಪತಿ. (2016). ಬೌದ್ಧ ಧರ್ಮದ ಅನನ್ಯತೆ. ಕಾವ್ಯ ಕಲಾ ಪ್ರಕಾಶನ, ಬೆಂಗಳೂರು.
- ಶ್ರೀ ಧಮ್ಮಾನಂದ ಕೆ. (ಮೂ.); ಅನಿಶ್ ಭೋದ್ (ಅನು.) (2008). ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು. ಮಹಾಬೋಧಿ ಸೋಸೈಟಿ, ಬುದ್ಧ ವಚನ ಟ್ರಸ್ಟ್, ಬೆಂಗಳೂರು.
- Dhammananda. K. (1997). Buddhism in the eyes of intellectuals. The the corporate body of the Buddha educational foundation, Taiwan.
- Pategama Gnanarama. (1998). Aspects of Early Buddhist Sociological thought. Ti-sarana Buddhist Association Publication, Singapore.
- Sudhakar Rao.G. (2014). The Buddha’s Teachings a Scientific approach. Bouddha maha sabha(R), Dakhinakannada.
- Thera Piyadassi. (2009). Buddhism A leaving message. Buddhist publication society, Sri Lanka.
- Venerable Aacharya Buddharakkhita. (2002). Buddhism and social justice. Buddha vachana trust, Bengaluru.